Reg No. M 1299 (Founded 1917) Daily & Weekly

ಸತ್ಯವಾದಿ

ವಾರದ ಸಂಚಿಕೆ (ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 190] ಸೋಮವಾರ 23—4—45 [6 ಪೈ

ಸ್ಟಾಲಿನರೇ ಖುದ್ದಾಗಿ ಬರ್ಲಿನ್ ರಂಗದ ಸೇನಾನಿಯಾದರು

ಟೀ

ಒಂದು ನೂರು ವರ್ಷದ ಕೆಳಗೆ ಲಂಡನ್ನಿನಲ್ಲಿ ಭಾರತದ ಟೀ ಒಂದು ಪೌಂಡಿಗೆ ರೂ. 25 ರಂತೆ ಮಾರುತ್ತಿದ್ದರು. 1823 ಅಸ್ಸಾಂನಲ್ಲಿ ಟೀ ಬೆಳೆಯಾಗುತ್ತದೆಂದು ಮೇಜರ್ ರಾಬರ್ಟ್ ಬ್ರೂಸರು ಪತ್ತೇಹಚ್ಚಿದರು. 1884 ರಲ್ಲಿ ಭಾರತದ ಗವರ್ನರ್ ಜನರಲ್ಲರಾಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕರು ಒಂದು ಕಮಿಟಿಯನ್ನು ಏರ್ಪಾಡುಮಾಡಿ ಟೀ ಬೆಳೆಯಲು ಉತ್ತೇಜನ ಕೊಟ್ಟರು. ಇದರಿಂದ ಭಾರತದಲ್ಲಿ ಟೀ ಬೆಳೆಯಲು ಅನುಕೂಲವಾಯಿತು. 1939 ರಲ್ಲಿ ಅಸ್ಸಾಂ ಟೀ ಕಂಪೆನಿ ಸ್ಥಾಪಿತವಾಯಿತು. 1938 ರಲ್ಲಿ ಎಂಟು ಪೆಟ್ಟಿಗೆ ಟೀ ಮಾರಾಟವಾಗಿ ಪೌಂಡು 1 ಕ್ಕೆ ರೂ. 12 ರಿಂದ ರೂ. 25 ರವರೆಗೆ ಬಿಕರಿಯಾಯಿತು. ಈಗ ಭಾರತದಲ್ಲಿ 850000 ಎಕರೆ ಜಮೀನಿನಲ್ಲಿ 50 ಕೋಟಿ ಪೌಂಡು ಟೀ ಬೆಳೆಯಾಗುತ್ತಿದೆ, ಬಹು ಭಾಗ ಅಸ್ಸಾಂ ಸುತ್ತಮುತ್ತಲೂ ಮತ್ತು ಸ್ವಲ್ಪ ದ ಹಿಂದೂಸ್ಥಾನದಲ್ಲಿಯೂ ವ್ಯವಸಾಯವಾಗುವುದು. ವರ್ಷಕ್ಕೆ ಇಂಗ್ಲೆಂಡಿನವರು 35 ಕೋಟಿ ಪೌಂಡು ಟೀಯನ್ನು ಕೊಳ್ಳುವರು. ಭಾರತೀಯರು ವರ್ಷಕ್ಕೆ 12 ಕೋಟಿ ಪೌಂಡು ಟೀ ಉಪಯೋಗಿಸುವರು.

ಹೊಟ್ಟೇಪಾಡಿಗೆ ಸೇರಿರುವ ಸೈನ್ಯ

ಇರಾನಿನಲ್ಲಿಯ ಬಡಪಕ್ಷಕ್ಕೆ ಸೇರಿದ ಪತ್ರಿಕೆಗಳು ಭಾರತೀಯ ಸೈನ್ಯಗಳನ್ನೇ ಅಧಿಕವಾಗಿ ಹೆಸರಿಸುತ್ತಿವೆ. ಈ ಸೈನ್ಯವು ಬಲಪಂಥ ಬ್ರಾಹ್ಮಣಾರ್ಥವಾ ಹೊಟ್ಟೇವಾಡಿಗಾಗಿ ಸೇರಿದ ಸೈನ್ಯವೆಂದು ಬರೆದಿರುವವು.

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಇಟಲಿಗೆ ಸ್ಥಾನವಿಲ್ಲ.

o o

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ 15000 ಫ್ರೀ ಟಿಕೀಟುಗಳು ಹಂಚಲ್ಪಟ್ಟಿರುತ್ತೆ.

o o

ಜರ್ಮನರು ಮಿತ್ರರ ದೇಶಗಳಲ್ಲಿ ಹಿಡಿದ ಯುದ್ಧ ಖೈದಿಗಳ ಪಟ್ಟಿಯು, ಜರ್ಮನಿಯ ರಿಸರ್ವ್ ಭಂಗಾರವನ್ನು ಹಿಡಿದ ಅಮೇರಿಕ ಸೈನೀಕರ ಕೈಗೆ ಸಿಕ್ಕಿದೆ.

o o

ಮದರಾಸು ಲಕ್ಷ್ಮೀಕಾಂತಂ ಶಾಸಿ ಮೊಖದ್ದಮೆಯಲ್ಲಿ ಎಕ್- ಎ -ಕೃಷ್ಣನ್ ಪರ ಶ್ರೀ ಮುನ್ನಿಯವರು ವಕಾಲತ್ತು ವಹಿಸುವರೆಂದು ಗೊತ್ತಾಗಿದೆ.

ಬರ್ಲಿನ್ ರಂಗದಲ್ಲಿ ರಷ್ಯಾದ ಮುಖ್ಯ ಸೇನಾ ನಾಯಕತ್ವವನ್ನು ಸ್ಟಾಲಿನ್ನರೇ ವಹಿಸಿ ಕೊಳ್ಳುವರೆಂದು ಹೇಳಲಾಗಿದೆ.

o o

ಬರ್ಲಿನ್ನಿನ ಹೊರ ರಕ್ಷಣಾ ವ್ಯವಸ್ಥೆಯು ಮೂರು ಲೈನುಗಳಾಗಿ ವಿಭಾಗಿಸಲ್ಪಟ್ಟಿದೆಯೆಂದೂ, ಬರ್ಲಿನ್ ನಗರದ ಬಳಗೂ 3 ರಕ್ಷಣ ವ್ಯವಸ್ಥೆ ಇದೆಯೆಂದು ಹೇಳಲಾಗಿದೆ

o o

ಪೋಲೆಂಡಿನ ಹಂಗಾಮಿ ಸರಕಾರಕ್ಕೂ ರಷ್ಯಾಕ್ಕೂ ಒಪ್ಪಂದವಾಗಿದೆ- ಒಬ್ಬರಿಗೊಬ್ಬರು ಸಹಾಯಕರಾಗರಿರಬೇಕೆಂಬುದೇ ಮುಖ್ಯ ವಿಷಯ-

o o

ಲೆಸ್ಸಿಬಳಿ ಜರ್ಮನರು ತಯಾರಾದು ಮಾಡುತ್ತಿದ್ದ 'ವಿಷವಾಯು ಕಾರ್ಖಾನೆಯನ್ನು ವಿಮ್ರಸೇನೆ ಪತ್ತೇ ಹಚ್ಚಿದೆ.



ಈಜಿಪ್ಟ್ ರಾಯಭಾರಿ (ಎಡಗಡೆ) ಯು. ಎಸ್. ಎ. ಸೆಕ್ರಟರಿ (ಮಧ್ಯ) ತುರ್ಕಿ ರಾಯಭಾರಿ (ಬಲಗಡೆ) ಪ್ರಸಂಚದ ಶಾಂತಿ ಸಭ್ರಕ್ಕೆ ರಜು ಹಾಕುತ್ತಿರುವುದನ್ನು ತೋರಿಸುವ ಚಿತ್ರ

ಕಿಸ್ ಎಂಡ್ ಟೆಲ್

'ಕಿಸ್ ಎಂಡ್ ಟೆಲ್' ಎಂಬ ಚಿತ್ರದಲ್ಲಿ 16 ವರ್ಷದ ಅವಿವಾಹಿತ ತರುಣಿ ಷೆರ್ಲಿ ಟೆಂಪಲ್ಲಳನ್ನು 22 ಜನ ನಟರು 99 ಸಲ ಗಾಢವಾಗಿ ಚುಂಬಿಸಿದಾಗ ಅಕೆ ಶಾಂತಚಿತ್ತಳಾಗಿದ್ದಳಂತೆ. ನೀನು ಗುಪ್ತವಾಗಿ ಚುಂಬನದ ಅಭ್ಯಾಸ ಮಾಡಿದ್ದೆಯಾ ಎಂದು ಅಕೆಯನ್ನು ಪ್ರಶ್ನಿಸಲು ಅವಳು ಇಲ್ಲವೆಂದಳು. ಆದರೆ ವಾರ್ಷಿಕೋತ್ಸವಗಳಲ್ಲಿ ಅಥವಾ ಅದರ ಸಂಬಂಧಪಟ್ಟ ಸಮಾರಂಭಗಳಲ್ಲಿ ಒಂದೆರಡು ಸಾರಿ ಹಾಗೆ ನಡೆದಿರಬಹುದು ಎಂದು ಉತ್ತರವಿತ್ತಳು. ಈ ದೃಶ್ಯವನ್ನು ನೋಡುತ್ತಿದ್ದ ಅವಳ ತಾಯಿಗೆ ಡಂಗಾಯಿತಂತೆ. ನನಗೆ ಇದು ಗೊತ್ತೇ ಇಲ್ಲ, ನಾನು ಇಂಥಾದ್ದನ್ನು ನೋಡಿದ್ದು ಇದೇ ಮೊದಲು ಎಂದಳಂತೆ.

ನಿಗ್ರೋ ವಿಮಾ ಸಂಘ

ನ್ಯೂಯಾರ್ಕಿನಲ್ಲಿ ನೀಗ್ರೋ ಜನಗಳೇ ಎಮೂ ಕಂಪೆನಿಯನ್ನು ಮಾಡಿಕೊಂಡಿರುವರು. ಅವರದೇ ಒಂದು ಬ್ಯಾಂಕೂ ಸ್ಥಾಪನೆಯಾಗುವುದರಲ್ಲಿದೆ. ಕಂಪೆನಿಯ ಅಧ್ಯಕ್ಷರು ಡಾ || ಚಾರ್ಲ್ಸ್ ಎನ್. ಗೇಡ್, ಹಾರ್ಲಿಂಗ್‌ನ ದಂತ ವೈದ್ಯರು.

ಜಿಪುಣನ ಮರಣ

ಸೀಸಂಪದಗಳನ್ನು ಇಟ್ಟುಕೊಂಡು ಸತ್ತನು ಕೊಟ್ಟಾಪುರದಲ್ಲಿ ಒಬ್ಬ ಭಿಕ್ಷುಕನು. ಹಸಿವೆಯಿಂದ ಬಾಡಿ ರಸ್ತೆಯ ಪಕ್ಕದಲ್ಲಿ ಸತ್ತನು. ಪೋಲೀಸಿನವರು ಪರೀಕ್ಷಿಸಿದಾಗ ಅವನ ಹೊದಿಕೆಯಲ್ಲಿ ಕೆಲವು ನೂರು ರೂಪಾಯಿಗಳ ನೋಟ್ಸಿಗಳು ಕಂಡುಬಂದವು

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಆರೋಗ್ಯ ಕೀರ್ತಿ, ಕೈಗೊಂಡ ಕಾರ್ಯಗಳಲ್ಲಿ ಜಯ, ಧನ ಲಾಭ ಶತ್ರುನಾಶ ಈ ಫಲಗಳನ್ನು ಈ ವಾರದಲ್ಲಿ ಅನುಭವಿಸುವಿರಿ.

ವೃಷಭ— ಚಿತ್ತಸ್ಥೈರ್ಯವಿರುತ್ತದೆ ಯಾದುದರಿಂದ ಮಾನಸಿಕ ಸಂಕಾಪಗಳಿರುವುದಿಲ್ಲ ಧನ ಮತ್ತು ಆರೋಗ್ಯಾನುಕೂಲಗಳೂ, ಮಿತ್ರ ಸಹಾಯ, ದಾನ ಧರ್ಮ ಶ್ರದ್ಧೆ ಇರುತ್ತವೆ.

ಮಿಥುನ— ವ್ಯವಹಾರದಲ್ಲಿ ಉತ್ತಮ ಲಾಭವನ್ನು ಪಡೆಯುವಿರಿ. ಮನಸ್ಸು ಪ್ರಸನ್ನತೆಯಿಂದ ಕೂಡಿರುತ್ತೆ. ಉತ್ಸಾಹದೊಡನೆ ಉತ್ತಮ ಕಾರ್ಯಗಳಲ್ಲಿ ಧನವ್ಯಯ ಮಾಡುವಿರಿ.

ಕರ್ಕಾಟಕ— ಅನಾರೋಗ್ಯದ ಕ್ಲೇಶ, ಮನೋಚಂಚಲತೆಗಳು ನಿಮ್ಮನ್ನು ಬಾಧಿಸುತ್ತವೆ. ಆದಾಯ ಕಡಮೆ, ಖರ್ಚು ಹೆಚ್ಚು, ಆದುದರಿಂದ ಅನವಧಾನ ಹೆಚ್ಚಾಗಿರುತ್ತದೆ.

ಸಿಂಹ— ಆದಾಯ ಕಡಮೆ, ಕುಟುಂಬದವರಿಗೆ ದೇಹದಲ್ಲಿ ಆರೋಗ್ಯ, ಇವುಗಳಿಂದ ತಾಪತ್ರಯಗಳು ಹೆಚ್ಚು. ವ್ಯವಹಾರದಲ್ಲಿ ಕಲಹಕ್ಕೆ ಅವಕಾಶಕೊಡದೆ ಜಾಗರೂಕತೆಯಿಂದ ವರ್ತಿಸಿರಿ.

ಕನ್ಯಾ— ಮನಸ್ಸು ಸಂತೋಷದಿಂದಿರುತ್ತದೆ. ಆದಾಯ ಚೆನ್ನಾಗಿರುವುದರಿಂದ. ಉದ್ಯೋಗದಲ್ಲಿ ಆಡಚಣೆಯೂ ಇಲ್ಲ. ಆರೋಗ್ಯವೂ ಚೆನ್ನಾಗಿರುತ್ತದೆ. ನಿಮಗೆ ಬೇಕಾಗಿರುವುದೂ ಇದೇ ತಾನೆ.

ತುಲಾ— ಲೋಕಾಪವಾದ ಬಾರದಂತೆ ಜಾಗರೂಕತೆಯಿಂದ ನಿಮ್ಮ ಕೆಲಸ ಕಾರ್ಯಗಳನ್ನು ನಡೆಸಿರಿ. ಎಲ್ಲಾ ಬಿಷಯಗಳಲ್ಲಿಯೂ ಅನುಕೂಲವಾಗಿದೆ

ವೃಶ್ಚಿಕ— ಆದಾಯ ಸ್ವಲ್ಪ- ಆರೋಗ್ಯ ಸಾದಾರಣ. ವ್ಯವಹಾರದಲ್ಲಿ ಸ್ವಲ್ಪ ತೊಡಕುಗಳು, ಬಂಧುಗಳಲ್ಲಿ ಕಲಹ. ಈ ಯೋಗಗಳು ಕಾಣಬರುತ್ತವೆ. ಆದುದರಿಂದ ಜಾಗ್ರತೆ.

ಧನಸ್ಸು— ನಿಮ್ಮ ಮಿತ್ರರು ನಿಮ್ಮ ಕಷ್ಟಗಳಿಗೆ ನೆರವಾಗುವರು. ಆರೋಗ್ಯವೂ ಚೆನ್ನಾಗಿರುತ್ತೆ.

ಮಕರ— ಶರೀರಾರೋಗ್ಯ ಕೆಡುವ ಸಾಧ್ಯತೆಯುಂಟು. ಖರ್ಚು ಹೆಚ್ಚಾಗಬಹುದು. ಕೆಲಸಕಾರ್ಯಗಳಲ್ಲಿ ವಿಘ್ನ ಬರಬಹುದು. ಹಾಪಾಕಾಗಿರಿ.

ದೇಶವಿದೇಶ

ಯೂರೋಪಿನಲ್ಲಿರುವ ಅಮೇರಿಕ ಸೈನ್ಯಗಳ ಉಪಯೋಗಕ್ಕಾಗಿ ನ್ಯೂಯಾರ್ಕ್ ಮತ್ತು ವಾಷಿಂಗ್ಟನ್ ಪಟ್ಟಣಗಳಿಂದ ಪ್ರತಿ ದಿವಸವೂ 1200 ಟೈಂ ಯಿಂಟ್ ಮನುಷ್ಯ ಶಕ್ತಿಯನ್ನು ವಿಮಾನಗಳಲ್ಲಿ ಸಾಗಿಸಿ ರಣರಂಗದ ಆಸ್ಪತ್ರೆಗಳಲ್ಲಿ ಉಪಯೋಗಿಸುವರು.

ಂ ಂ

ವಾನ್ ಪಾಪನ್ನನ್ನು ಜರ್ಮನ್ನರು ಜೀಕಂತಲೇ ಶತ್ರುಗಳ ಕೈಗೆ ಬಿಟ್ಟಂತೆ. ಈಸ್ತಿಂದಾದರೂ ಶಾಂತಿ ಪರತ್ತು ಸ್ವಲ್ಪ ಸಡಿಲವಾಗಲೆಂಬ ಆಶೆಯಿಂದಲಂತೆ.

ಂ ಂ

ಈ ಮೊಖದ್ದಮೆಯಲ್ಲಿ 5 ನೇಅಸರಾಧಿ ಶ್ರೀಡಾಮುಲು ನಾಯಿಡುರವರ ಬಿಡುಗಡೆ ಮಾಡಲ್ಪಟ್ಟಳು. ಇವರ ಪರ ಬೊಂಬಾಯಿನ ಶ್ರೀ ಮುನ್ಷಿಯವರು ವಕಾಲತ್ ನಡೆಸಿದರು.

ಂ ಂ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಲೂಬ್ಲಿನ್ ಸರ್ಕಾರದ ಪ್ರತಿನಿಧಿಗೆ ಅವಕಾಶ ಕೊಡಬೇಕೆಂದು ಸ್ಟಾಲಿನ್ನರು ಮತ್ತೊಮ್ಮೆ ಒತ್ತಾಯಮಾಡಿರುವರು.

ಂ ಂ

ಮಧುರೆಯಲ್ಲಿ ಎಸ್ಕೈಲ್ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ಎರಡು ತಲೆಯ ಮಗುವನ್ನು ಹೆತ್ತಳು. ಕೂಸಿಗೆ 2 ಕಾಲು ಇವೆ ಮತ್ತೊಂದು ಕಾಲು ಇವೆ ಮತ್ತೊಂದು ಕಾಲು ಬಾಲದ ಹಾಗೆ ಚಿಕ್ಕದಾಗಿದೆ. ತಾಯಿಗೆ ಇದು ಚೊಚ್ಚಲು ಮಗು. ಈ ಜನನವಾದ ಕೂಡಲೇ ಮಗುವು ಪ್ರಾಣಬಿಟ್ಟಿತು- ಆಸ್ಪತ್ರೆಯಲ್ಲಿ ಇದನ್ನು ದೃತಿಯಲ್ಲಿ ಇಟ್ಟಿರುವರು. ಇದನ್ನು ನೋಡಲು ಜನರು ಆಸ್ಪತ್ರೆಗೆ ಕಂಡಕಂಡವಾಗಿ ಬರುತ್ತಿರುವರು.

ಕಂಭ— ನಷ್ಟ, ಕಲಹಗಳಿಗೆ ಹೆಚ್ಚು ಅವಕಾಶವಿರುವುದರಿಂದ ಈ ವಾರ ಹೆಚ್ಚು ವ್ಯವಹಾರಗಳಲ್ಲಿ ಆಸಕ್ತರಾಗದಿರುವುದು ಒಳ್ಳೇದು.

ಮೀನ— ಈ ವಾರ ನಿಮಗೆ ಖರ್ಚು ಹೆಚ್ಚಾಗಿರುತ್ತದೆ. ಆರೋಗ್ಯ ಕೆಡದಂತೆ ನೋಡಿಕೊಳ್ಳಿ, ಕಳ್ಳಕಾಕರ ಭಯವೂ ಉಂಟು. ವ್ಯವಹಾರದಲ್ಲಿ ಒಂದು ಸಮಸ್ಥಿತಿಯಲ್ಲಿರಿ. ಆಗ ನಿಮಗೆ ಹೆಚ್ಚು ತೊಂದರೆಯಾಗದು.

ಗೋರಿಂಗಿನ ಸುಳುವೇ ಈಗ ಇರುವುದಿಲ್ಲ. ಆತನು ಜರ್ಮನಿ ಗಡಿಯಲ್ಲಿ ಖೂನಿ ಮಾಡಲ್ಪಟ್ಟಿರುವನು ಅಥವಾ ತಾನೇ ತನ್ನ ಪ್ರಾಣವನ್ನು ನಷ್ಟಮಾಡಿಕೊಂಡಿರುವನು ಎಂದು ಹೇಳಲಾಗಿದೆ.

ಂ ಂ

ಹಿಟ್ಲರನು ಈಗ ಅಧಿಕಾರದಲ್ಲಿಲ್ಲವೆಂದೂ, ಹಿಮ್ಲರನೇ ಎಲ್ಲಾ ಕಾರ್ಯಭಾಗವನ್ನೂ ನಡೆಸುತ್ತಿರುವನೆಂದೂ ವಾರ್ತೆ ಹರಡಿದೆ

ಂ ಂ

ಬಂಗಾಳದ ದೊಡ್ಡದಾದ ಮತ್ತು ಪ್ರಮುಖವಾದ ವ್ಯಾಪಾರ ಕೇಂದ್ರವಾದ ಚಾಮುಹಾನಿಯಲ್ಲಿ ಭಾರಿ ಅಗ್ನಿಯುಂಟಾಗಿ 20–25 ಲಕ್ಷ ರೂಪಾಯಿಗಳ ನಷ್ಟವುಂಟಾಗಿದೆ. ಸುಮಾರು ಇನ್ನೂರು ವಂದಿ ತಮ್ಮ ವ್ಯಾಪಾರ ಸರಕನ್ನು ಕಳೆದುಕೊಂಡಿರುತ್ತಾರೆ.

ಂ ಂ

ಭಾರತದಲ್ಲಿ ಸರ್ವರೂ ಮಹಾತ್ಮಾ ಗಾಂಧಿ ಮತ್ತು ಪಂಡಿತ ಜವಹರ್‌ಲಾಲ್ ಮೇಲ್ಪಂಗ್ತಿಯನ್ನು ಅನುಸರಿಸಿದಲ್ಲಿ ದೇಶವು ಹೇಗೆ ಉದ್ಧಾರವಾಗುತ್ತೆಂದು ಆದವಾನಿ ಸಬ್ ಕಲೆಕ್ಟರ್‌ರು ಪೌರಸಭಾನಧ್ಯಕ್ಷರೂ ಸದಸ್ಯರ ಮುಂದೆ ಮಾಡಿದ ಭಾಷಣದಲ್ಲಿ ಹೇಳಿದರು.

ಂ ಂ

ಭಾರತದಿಂದ ಅಮೇರಿಕಾಕ್ಕೆ ಮೂರುಕೋಟಿ ವರಳು ಜೀಲಗಳನ್ನು ಭಾರತ ಸರ್ಕಾರವು ಕೊಡಲೊಪ್ಪಿರುವುದೆಂದು ಅಮೇರಿಕಾ ಯುದ್ಧ ಸಾಮಗ್ರಿ ಬೋರ್ಡಿನವರು ಪ್ರಕಟಿಸಿರುವರು.

ಖ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ರಷ್ಯಾದ ಪ್ರತಿನಿಧಿಯಾಗಿ ಮಿ || ಮೂಲಟೋವರನ್ನು ಸ್ಟಾಲಿನ್ನರು ಕಳುಹಿಸಿವರು.

ಂ

ಜರ್ಮನಿಯು ರೈನ್ ನದಿಗೆ ಕಟ್ಟಿರುವ ಸೇತುವೆಗೆ ಮಿತ್ರರು ರೂಸ್ವಲ್ಟ್ ಸೇತುವೆ ಎಂದು ನಾಮಕರಣ ಮಾಡಿರುವರು.

ಂ ಂ

ಜಪಾನ್ ನೋಟುಗಳನ್ನು ಚೀನಾದೇಶದಲ್ಲಿ ಕಸಕ್ಕಿಂತ ಕಮ್ಮಿಯಾಗಿ ನೋಡುವರು. ಒಂದು ಅಕ್ಕಿಕಾಳಿಗೆ 2 ಜಪಾನ್ ಡಾಲರ್.

ಂ ಂ

ಯುದ್ಧಾನಂತರ ಭಾರತಕ್ಕೆ ಆಸ್ಟ್ರೇಲಿಯಾ ಗೋಧಿಯು ಸರಬರಾಜಿಲ್ಲ. ಅದೆಲ್ಲಾ ಯೂರೋಪಿಗೆ ರವಾನೆಯಾಗುತ್ತೆ.

ಂ ಂ

ರೂಸ್ವೆಲ್ಟರ ಉಯಿಲು ಹೊರಪಟ್ಟಿದೆ ಹೆಂಡತಿಯು ತನಗೆ ಬೇಕೆಂದಷ್ಟನ್ನು ತಾ ಇರುವ ತನಕ ಅನುಭವಿಸಬಹುದು. ಮಕ್ಕಳಿಗೆ ಒಬ್ಬೊಬ್ಬರಿಗೆ 5 ರಲ್ಲಿ 1 ಭಾಗ.

ಂ ಂ

ಜಪಾನ್ ಚಕ್ರವರ್ತಿಯು ಅರಮನೆಯೂ ಮತ್ತು ಮೆಯಿಜಿ ದೇವಾಲಯವೂ ಅಮೇರಿಕ ವಿಮಾನಗಳಿಂದ ಸುಟ್ಟುಹೋದವು.

ಂ ಂ

ಹೊಸ ಜರ್ಮನ್ ಪೈದಿ ಕ್ಯಾಪ್ಟನ್ ಕ್ಲಾಸ್ ಈಗ ನೇಲ್ಸನ ಒಂದು ಹುಚ್ಚಾಸ್ಪತ್ರೆಯಲ್ಲಿ ಬಿದ್ದಿರುವನು.

ಆರೋಗ್ಯ ಸೌಖ್ಯ ನಮ್ಮ ಜನ್ಮ ಹಕ್ಕು

— ಪ್ರತಿ ಊಟವನ್ನು ಔತಣದಂತೆ ಮಾಡಿಕೊಳ್ಳಿರಿ —

ನಿಮಗೆ ಆರೋಗ್ಯಕರವಾದ, ಸಂತಸದಾಯಕವಾದ ಊಟ, ರುಚಿಕರವಾದ ಉಪ್ಪಿನಕಾಯಿ, ಸಾರು, ಹುಳಿ, ವ್ಯಂಜನ ಬೇಕಾದರೆ ಟಿ.ಜಿ. ಹಿಂಗನ್ನು ಸ್ವಲ್ಪಹಾಕಿ. ಆಗ ನೋಡಿ ಅದರ ಗುಣ. ಒಂದು ದಿವಸ ಉಪಯೋಗಿಸಿದರೆ ಆಮೇಲೆ ಟಿ.ಜಿ. ಹಿಂಗನ್ನು ಪ್ರತಿದಿನವೂ ಉಪಯೋಗಿಸುತ್ತೀರಿ.

1 ಪೌಂಡ್, ಅರ್ಧ ಪೌಂಡ್, ಕಾಲು ಪೌಂಡ್ ಮತ್ತು 1 ಪಲಂಗಳಲ್ಲಿ ಎಲ್ಲಾ ವ್ಯಾಪಾರಗಾರರಲ್ಲೂ ಮತ್ತು ಈ ಕೆಳಗಿನ ನಿಳಾಸದಾರರಲ್ಲೂ ದೊರೆಯುವುದು.

ವಲ್ಲಭದಾಸ ತೇಜ್‌ಪಾಲ್,

ಹಿಂಗು, ಕಸ್ತೂರಿ, ಕೇಸರಿ ವ್ಯಾಪಾರಗಾರರು,

14 ಗೋವಿಂದಪ್ಪ ನಾಯಕ್ ಬೀದಿ. ಬಿ.ಟಿ. ಮದರಾಸ್.

ಉದ್ಯಮದ ಬಗ್ಗೆ ಪ್ರಶ್ನಿಸಿದರೆ ಲಂಡನ್ನಿನವರು ವಾಸಿಸುವ ಬೀದಿಯನ್ನು ತಿಳಿಸುವರು !

ನೀನು ಲಂಡನ್ನಿನ ಒಬ್ಬ ನಿವಾಸಿಯನ್ನು ' ನಿನ್ನ ಕಸಬೇನು ' ಎಂದು ಕೇಳಿದರೆ, ಅವನು ತಾನು ವಾಸವಾಗಿರುವ ಬೀದಿಯ ಹೆಸರನ್ನು ಹೇಳುವನು. ಇದರಿಂದ ನಿನಗೆ ಅವನು ಯಾವ ಉದ್ಯೋಗ ಮಾಡುವನೆಂಬುವುದ. ಗೊತ್ತಾಗುವುದು

ಲಂಡನ್ನಿನ ಪ್ರಮುಖ ವೈದ್ಯರೆಲ್ಲಾ ಹಾರ್ಲಿ ಬೀದಿಯಲ್ಲಿ ವಾಸ ಮಾಡುವರು. ವೃತ್ತಪತ್ರಿಕೆಗಳವರೆಲ್ಲಾ ಫ್ಲೀಟ್ ಬೀದಿಯಲ್ಲಿ ವಾಸಮಾಡುವರು. ನಜ್ರ ವ್ಯಾಪಾರಿಗಳು ಹಿಟಕ್ ಗಾರ್ಡನ್ಸಿನಲ್ಲಿ ಅಂಗಡಿ ಇಟ್ಟಿರುವರು, ವ್ಯಾಪಾರ ನಡೆಸುವರು. ಆಹಾರ ಪದಾರ್ಥಗಳನ್ನು ಮಾರುವ ದೊಡ್ಡ ಅಂಗಡಿಯವರು ಈಸ್ಟ್ ಚಿಪ್‌ಸಲ್ಲಿರುವರು. ಗಂಧಿಗೆಯವರು ಟೂಲಿ ಬೀದಿಯಲ್ಲಿರುವರು. ದವಸದ ದಳ್ಳಾಳಿಗಳು ಮಾರ್ಕ್‌ನಲ್ಲಿರುವರು. ರಬ್ಬರ್ ವ್ಯಾಪಾರಿಗಳು ಮಿಂಸಿಂಗನಲ್ಲಿರುವರು. ಪ್ರಪಂಚದ ಬ್ಯಾಂಕ್‌ಗಳ ಶಾಖೆಗಳು ಲಂಬಾರ್ಡ್ ಬೀದಿಯಲ್ಲಿವೆ. ತ್ರುಗೋರ್ಟನ್ ಬೀದಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಕಾರ್ಯಾಲಯಗಳು ನೂರಾರಿವೆ. ಲೆಡಿನ್ ಹಾದಿಯಲ್ಲಿ ಹಡಗಿನ ಕಂಪೆನಿಗಳಿವೆ. ಸಾವಿರೋ ಬೀದಿಯಲ್ಲಿ ಆರ್ಜಿ ಅಂಗಡಿಗಳಿವೆ. ಹೀಗೆ ನಾನಾ ಕೆಲಸಗಾರರು ಒಂದೊಂದು ಬೀದಿಯಲ್ಲಿರುತ್ತಾರೆ.

ಹಾರ್ಲೀ ಬೀದಿಯಲ್ಲಿ ವೈದ್ಯರಿರುವರಷ್ಟೆ. ಅಲ್ಲಿರುವ 150 ದೊಡ್ಡ ಮನೆಗಳಲ್ಲಿ 4 ಅಂತಸ್ತುಗಳಿವೆ. ಸಣ್ಣ ಮನೆಗಳು 3 ಅಥವಾ 4 ಮಾತ್ರಾ ಇವೆ. ಒಂದೊಂದು ಮನೆಯಲ್ಲಿ 8–10 ವೈದ್ಯರು ವಾಸಿಸುವರು. ಹಿಂದೆ ಹಾರ್ಲಿ ಬೀದಿಯಲ್ಲಿ ವೈದ್ಯರು ವಾಸಮಾಡುತ್ತಿದ್ದರು. ಈಗ ಮನೆಗಳು ಕಡಮೆಯಾಗಿ ತಮ್ಮ ಬೋರ್ಡುಗಳನ್ನು ಮನೆಯ ಮುಂದೆ ಹಾಕಿಕೊಂಡು, ಅರ್ಧ ದಿವಸ ಲಂಡನ್ ಆಸ್ಪತ್ರೆಯಲ್ಲಿ ಕೆಲಸಮಾಡುವರು ಇಲ್ಲಿ ಆಪರೇಷನ್ ನಡೆಸುವುದು, ಕಾಹಿಲೆಯವರನ್ನು ವಾರ್ಡುಗಳಲ್ಲಿ ನೋಡುವುದು, ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು, ಈ ಕೆಲಸಗಳಲ್ಲಿ ನಿರತರಾಗಿರುವರು. ಇದಕ್ಕೆ ಇವರಿಗೆ ಸಂಭಾವನೆ ಕಮ್ಮಿ. ಕೆಲವು ವೇಳೆ ಯಾವ ಬಗೆಯ ಪಾರಿತೋಷಕವೂ ಇಲ್ಲದೆ ಕೆಲಸ ಮಾಡುವರು. ಆಸ್ಪತ್ರೆಯ ಕೆಲಸ ಮುಗಿಸಿಕೊಂಡು ತಮ್ಮ ಕನ್ಸಲ್ಟಿಂಗ್ ರೂಮಿಗೆ ಬರುವರು. ಅಲ್ಲಿ 1 –20 ರೋಗಿಗಳನ್ನು ಪರೀಕ್ಷಿಸಿ ಒಬ್ಬೊಬ್ಬ ರೋಗಿಯಿಂದ 3 ಹಿಲಿಂಗುಗಳನ್ನು ವಸೂಲ್ಮಾಡುವರು. ಅವರಿಗೆ ಯಾವ ಯಾ ಔಷಧೋಪಚಾರ ಅವಶ್ಯಕವೆನ್ನುವುದನ್ನು ಹೇಳುತ್ತಾರೆ ಡಾಕ್ಟರುಗಳ ಫೀಜು ಕಾಹಿಲೆಗಳ ರೋಗಿಯ ಅಂತಸ್ತುಗಳ ಮೇಲೆ ಏರುಪೇರಾಗುವುದು ಈ ಬೀದಿಯಲ್ಲೇ ಬ್ರಿಟಿಷ್ ಮಂತ್ರಿ ಗ್ಲಾಡ್‌ಸ್ಟನ್ ವಾಸವಾಗಿದ್ದನು. ಈಗಲೂ ಆ ಮನೆಯಿದೆ. ಈಗ ನೂರು ವರ್ಷದಿಂದ ಹಾರ್ಲಿ ಬೀದಿಯು ವೈದ್ಯರುಗಳ ಮನೆಯಾಗಿದೆ. ಹಾರ್ಲಿ ಬೀದಿಯಲ್ಲಿನ ವೈದ್ಯರುಗಳೆಂದರೆ ರೋಗಿಗಳು ತಮ್ಮ ಕಾಯಿಲೆ ವಾಸಿಯೂದಂಕೇ ಎಂದು ತಿಳಿಯುವರು.

ಹಾರ್ಲಿ ಬೀದಿಯ ವೈದ್ಯರಿಗಾಗಿ ಕಟ್ಟಿದ್ದಲ್ಲ. ಹಿಂದೆ ಇದ್ದ ಭಾರಿ ಲಂಡನ್ನಿನ ವರ್ತಕರಿಗಾಗಿ. ಲಂಡನ್ ಅಭಿವೃದ್ಧಿಯಾದ ಹಾಗೆಲ್ಲಾ ಅವರು ಆ ಸ್ಥಳಗಳನ್ನು ಬಿಟ್ಟರು. ಒಬ್ಬ ವೈದ್ಯನಿಗೆ ಹಾರ್ಲಿ ಬೀದಿಯವನೆಂದರೆ ಅದೊಂದು ಪ್ರಸಿದ್ಧ ವೈದ್ಯನೆಂದು ಹೆಸರಾಗಿದೆ.

ಬೆಂಗಳೂರಿನಲ್ಲಿ ಒಬ್ಬ ಸೈಕಲ್ ಅಂಗಡಿಯವನು ರೂ. 150 ಬೆಲೆಯ ರ್ಯಾಲೆ ಬೈಸಿಕಲ್ಲನ್ನು ರೂ. 30 ಬೆಲೆಗೆ ಮಾರಿದ್ದಕ್ಕೆ ಶ್ರೀ ಹನುಮಂತ ಶೆಟ್ಟ ಎಂಬ ಆತನಿಗೆ 6 ತಿಂಗಳ ಸಜೆ ಮತ್ತು 1000 ರೂ. ಜುಲ್ಮಾನೆ ವಿಧಿಸಿದರು, ಅಲ್ಲದೆ ಈ ಅಪರಾಧಿಯು ತೆಗೆದುಕೊಂಡ 300 ರೂಪಾಯಿಗಳ ಸೈಕಿ ರೂ. 150 ಸರಕಾರಕ್ಕೂ, ಜಾಕಿ 150 ರೂ. ಗಳನ್ನು ಬೈಸಿಕಲ್ ಕೊಂಡ-ಕೊಂಡ ಶ್ರೀ ಬಸಪ್ಪನಿಂಬ ವನಿಗೂ ಕೊಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿರುವರು.

ಹಿಟ್ಲರ್ ಸೈತಾನ್

ಅಮಿತ ರಾಜ್ಯಗಳ ಆಕಾಂಕ್ಷೆಯಿಂದ ಅವರಿಸಲ್ಪಟ್ಟು ಕುಯುಕ್ತಿಯಿಂದ ಕೂಡಿದವನಾಗಿ, ವಿಧವೆಯಾದ ಜಪಾನಿನ ಸಹಾಯವು ದೊರೆಯಿತೆಂದು ವಿಜೃಂಭಿಸಿ, ಫಿರಂಗಿಯನ್ನು ಹಾರಿಸಿದೆ. ನಿನ್ನ ಮಾತಿಗೆ ಎದುರು ಹೇಳುವವರ್ಯಾರೂ ಇಲ್ಲವೆಂದು ಗರ್ವಪಟ್ಟು ಅಪಕೀರ್ತಿಯ ಪಾಲಾದೆ. ಅಮೇರಿಕಾ, ಬ್ರಿಟಿಷ್, ರಷ್ಯಾಗಳನ್ನು ಎದುರಿಸಿ ಗಂಗೆಯಲ್ಲಿ ಕಲೆಯಲು ಎಳೆಸಿರುವೆ. ನಿನ್ನಿಂದ ಯೂರೋಪಿನ ಅನೇಕ ಸಣ್ಣ ರಾಜ್ಯಗಳು ಕಂಗೆಟ್ಟು ಕಾಡುವಾಲಾದವು. ಹಿಟ್ಲರನೇ ! ನೀನು ಸೈತಾನನಂತೆ ಅವತಾರವೆತ್ತಿರುವೆಯಲ್ಲೋ !

ಫಲಭರಿತವಾದ, ಅನ್ನವಸ್ತ್ರಗಳಿಗೆ ಕೊರತೆಯಿಲ್ಲದ ಭಾರತ ದೇಶವೂ ನಿನ್ನಿಂದ ಕಷ್ಟಗಳ ಪಾಲಾಗಬೇಕಾಗಿ ಒದಿತು. ಸ್ವೇಚ್ಛೆಯಿಂದ ನಡೆಸಿದ ಸಂತೋಷದಿಂದ ಜೀವನವನ್ನು ಮಾಡುತ್ತಿದ್ದ ರಷ್ಯಾ ದೇಶವು ಮಹಾರಣರಂಗವಾಯಿತು. ಜಪಾನೀಯರು ಯುದ್ಧದಲ್ಲಿ ಹೋರಾಡುವ ವೀರಾಧಿವೀರರಾದರು. ನೀತಿದೂರರಾದ ಜರ್ಮನರು ಮರಣಹೋಮದಲ್ಲಿ ತಸ್ತರಾಗುತ್ತಿರುವರು. ಜರ್ಮನೀ ರಾಜ್ಯವನ್ನೆಲ್ಲಾ ನಾಶಗೊಳಿಸಿ, ಜನಗಳಿಗೆ ಅನ್ನವಿಲ್ಲದಂತೆ ಮಾಡಿ ಸುಟ್ಟು ಸಾಯಿಸಿದ ಮಹಾಭೂತ ಔಪನೇ, ಕಠೋರ ಹೃದಯನೇ, ನಿಕೃಷ್ಟನೇ !

ಹಸೀ ಕಳ್ಳನಂತೆ ನಿನ್ನನ್ನು ಅನುಸರಿಸಿರುವ ಮುಸೋಲನಿಯು ನಿನ್ನ ಬೋಳು ತಲೆಯ ಮೇಲೆ ಮುಸುಕನ್ನು ಹಾಕುವನು. ಪ್ರಬಲನಾದ ಸ್ಟಾಲಿನ್ ನಿನ್ನ ಪಕ್ಕೆಗಳಿಗೆ ತಿವಿದು ಎಲ್ಲವನ್ನೂ ' ಗುಟಕಾಯ ಸ್ವಾಹಾ ' ಮಾಡುವನು. ಪ್ರಮುಖರಾದ ಅಮೇರಿಕನ್ನರ ಸಹಾಯದಿಂದ ಚರ್ಚಿಲ್ ನಿನ್ನ ಬೆನ್ನಿನ ಮೇಲೆ ಏಟು ಕೊಡುವನು. ನೀನು ನಂಬಿದ ಫಾಸಿಸ್ಟ್ ವಂಗಣ್ಣರು ಒಟ್ಟಿಗೆ ಕಲೆತು ನಿನ್ನನ್ನು ಗುಳಿಯಲ್ಲಿ ಹೂಳುಹಾಕುವರು. ನಿನ್ನನ್ನು ಸಾಯಿಸದೆ ಬಿಡುವುದಿಲ್ಲ. ಆಗ ನಿನ್ನ ವ್ಯಥೆಗಳೆಲ್ಲಾ ದೂರವಾಗುವುವು. ಇನ್ನುಮುಂದೆ ನಿನ್ನ ಕುತಂತ್ರಗಳೂ, ರಾಕ್ಷಸ ಕೃತ್ಯಗಳೂ ನುಂಬರಿಯಲಾರವು. ಹೆಚ್ಚು ಬುದ್ಧಿ ಖರ್ಚು ಮಾಡದೆ ಈಗಲಾದರೂ ಬ್ರಿಟಿಷರ ಶರಣಹೊಕ್ಕು ಉದ್ಧಾರನಾಗು ನೀಚನೇ !

ಶುದ್ಧವಾದುದೆಂದು ಗ್ಯಾರಂಟಿ. ಯಾವ ಅಪರಿಶುದ್ಧವಾದ ಪದಾರ್ಥ ಮಿಶ್ರವಾಗಿಲ್ಲ. ದೇವಸ್ಥಾನಗಳಲ್ಲಿ, ಪೂಜಾಕಾರ್ಯಕ್ಕೂ, ಔಷಧಗಳಿಗೂ, ಆಹಾರಗಳಿಗೂ, ಶುಭ ಸಂತೋಷ ಕಾರ್ಯಗಳಲ್ಲಿಯೂ ಉಪಯೋಗಿಸಲರ್ಹವಾಗಿದೆ.

.... ಶ್ರೀ ಓಂ ಬ್ರಾಂಡ್ ಕೇಸರಿ ....

ಕೇಸರಿಯನ್ನು ಗಿರಾಕಿಗಳ ಅನುಕೂಲಕ್ಕಾಗಿ 1 ತೊಲ, 5 ತೊಲ, 1 ಪೌಂಡ ಅಥವ ಹೆಚ್ಚಾಗಿ ಬಿಕರಿಗೆ ಇಡಲಾಗಿದೆ.

ಸಾವರ್ಕ್ ಬ್ರಾಂಡ್

ಓಂ ಬ್ರಾಂಡ್ ಕೇಸರಿಯ ಪುಡಿಯನ್ನು ಕಾಲು ತೊಲ, ಅರ್ಧ ತೊಲ, ಒಂದು ತೊಲ, ಐದು ತೊಲ ಮತ್ತು ಒಂದು ಪೌಂಡುಗಳಲ್ಲಿ ಬಿಕರಿಗೆ ಏರ್ಪಾಡಾಗಿದೆ

ಅಲ್ಲದೆ ಪುಡಿ ಮತ್ತು ಮಿಶ್ರ ಕೇಸರಿಯನ್ನು 16|1 ತೊಲ, 8|1 ತೊಲ, 4|1 ತೊಲ, ಅರ್ಧ ತೊಲ, ಒಂದು ತೊಲ ಐದು ತೊಲ ಮತ್ತು ಚಿಲ್ಲರೆಯೂಗಿಯೂ ಬಿಕರಿಗೆ ಇಟ್ಟಿದೆ. ಇವು ಹೊಟಲ್ ಉಪಯೋಗಕ್ಕೆ ಉಪಯುಕ್ತವಾದುದ್ದು. ಒಂದು ಸಲ ಉಪಯೋಗಿಸಿದರೆ ನಮ್ಮ ಕೇಸರಿಯ ಮಹತ್ವ ತಿಳಿಯುವುದು.

ಎಲ್ಲಾ ವರ್ತಕರು ಈ ಕೇಸರಿಯನ್ನು ಮೂರುವರು. ಮತ್ತು —

ವಲ್ಲಭದಾಸ್ ತೇಜ್ ಪಾಲ್ ಹಿಂಗು, ಕೇಸರಿ, ಪಚ್ಚಕರ್ಪೂರ ವರ್ತಕರು
14. ಗೋವಿಂದಪ್ಪ ನಾಯಿಕ್ ಬೀದಿ ಬಿ.ಟಿ. ಮದರಾಸ್.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.

AT OPERA — 2 ನೇ ವಾರ
POOMPAVAI

'ಪೂಂಪಾವೆ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ಮಧುರಂ, ಕೃಷ್ಣ

Morning Shows, From 20—4—45 "BELLE STARR'

ಸತ್ಯವಾದಿ

ಸತ್ಯವಾದಿ ವಾರದಸಂಚಿಕೆ ಎಲ್ಲಾ ಊರುಗಳಲ್ಲೂ ಏಜೆಂಟರುಗಳು ಬೇಕಾಗಿದಾರೆ. ಹೆಚ್ಚಿನ ವಿಷಯಗಳಿಗೆ ಬರೆಯಿರಿ.

ಮ್ಯಾನೇಜರ್, ಸತ್ಯವಾದಿ

For Good Printing—

L. N. Press

Sriramp:t MYSORE

ಗ್ಲೂಕೋನೇಟ್ - ಡಿ.

.... ಬಿಲ್ಲೆಗಳು ....

ಕ್ಯಾಲ್ಸಿಯಂ ಗ್ಲೂಕೋನೇಟ್
ಮತ್ತು ವಿಟಮಿನ್ ಡಿ. ಮಿಶ್ರಿತವಾಗಿದ್ದು
ಚಾಕೊಲೆಟ್‌ನಂತೆ ರುಚಿಕರವಾಗಿದೆ.

ಕ್ಯಾಲ್ಸಿಯಂ ಅಭಾವದ ಎಲ್ಲಾ ಪರಿಸ್ಥಿತಿಗೂ
ಬಸಿರುತನ ಮತ್ತು ಮಕ್ಕಳು ಸ್ತನಪಾನಮಾಡುವ ಅವಧಿಗೂ,
ಮಕ್ಕಳ ಎಲುಬುಗಳು ಸದೃಢವಾಗಲೂ ಇದನ್ನು
ಶಿಫಾರಸು ಮಾಡಲಾಗಿದೆ.

ಐ. ಟಿ. ಎಲ್. ತಯಾರಿಕೆ

ಗೌತಮೆಂಟ್ ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲೆಬೊರೇಟರಿ

ಪೋ. ಆ. ಮಲ್ಲೇಶ್ವರಂ — ಬೆಂಗಳೂರು

ವಿವಿಧ ವಿಷಯ

ಮಂಗಳೂರಿನಲ್ಲಿ 12 ಆಣೆ ಬೆಲೆಯ ಒಂದು ಇಸ್ಪೀಟು ಪ್ಯಾಕನ್ನು ರೂ. 4-8-0 ಗೆ ಮಾರಿದ್ದಕ್ಕೆ ರೂ. 2500 ಜುಲ್ಮಾನೆಯಾಯಿತು.

ಪಾಟ್ನಾದಲ್ಲಿ ಒಬ್ಬ ಸರ್ಕಾರಿ ಅಧಿಕಾರಿಯು ಪಂಚೆಯು ಅಭಾವದಿಂದ ಸೀರೆಯನ್ನು ಉಟ್ಟುಕೊಂಡು ಬಂದೆನೆಂದು ಕೇಳಿ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವನ್ನುಂಟು ಮಾಡಿದನು.

ಸರಕಳೂರಿನಲ್ಲಿ ಸರಕಾರದವರು ಎರಡು ಸಾವಿರ ಟನ ದವಸ ಹಿಡಿಯುವ ಒಂದು ಕಣಜವನ್ನು ಕಟ್ಟಿ ದವಸವನ್ನು ದಾಸ್ತಾನು ಮಾಡುವರು. ಅಲ್ಲದೆ ಧಾನ್ಯಗಳನ್ನು ಚೀಲಗಳಲ್ಲಿ ತುಂಬಿಡುವ 27 ಚಿಕ್ಕ ಕಣಜಗಳನ್ನು ಕಟ್ಟುವರಂತಾಗಿರುವರು.

ಒರ್ಲಿನ್ಸಿಗೆ ರಷ್ಯನ್ನರು ಬಹಳ ಹತ್ತಿರ ಬಂದಿದ್ದಾರೆ. ಇವರ ಗುಂಡಿನ ಶಬ್ದ ಅಲ್ಲಿಗೆ ಕೇಳುತ್ತಿದೆ. ಹಿಟ್ಲರನು ನಿರಾಶೆಯಿಂದ ವೀರಾನೇಶರಾಗಿ ಜರ್ಮನರು ಕಾದಾಡಬೇಕೆಂದೂ, ಯಾರಾದರೂ ರಣರಂಗದಿಂದ ಹಿಂದಿರುಗಿದರೆ ಅಂಥವರನ್ನು ಅಲ್ಲಲ್ಲೇ ಗುಂಡುಹೊಡೆದು ಸಾಯಿಸಬೇಕೆಂದೂ ರಷ್ಯನರ ಕೈಗೆ ತಪ್ಪಿ ಹೆಂಸರು ಸಿಕ್ಕಿದರೆ ಬ್ಯಾರಕ್ಕಿನ ಸೂಳೆಯರ ಸ್ಥಿತಿಯಾಗುವುದೆಂದೂ ಪುಂಖಾನುಪುಂಖವಾಗಿ ಹೇಳಿಯುವನು.

ಆಸ್ಟ್ರೇಲಿಯಾದಲ್ಲಿ ರೈಲ್ವೆ ಸೌಕರ್ಯ ಹೆಚ್ಚಿಸಲು 76 ಮಿಲಿಯ ಪೌಂಡು ಯೋಜನೆಯು ಶಿಫಾರಸು ಮಾಡಲ್ಪಟ್ಟಿದೆ.

ನ್ಯೂಯಾರ್ಕ್ ಏ 17— ಒಂದೊಂದು ವಿಮಾನವಲ್ಲಿ 250000 ಪೌಂಡು ಭಂಗಾರದಂತೆ ಜರ್ಮನಿಯಿಂದ ಲಿಸ್ಬನ್ನಿಗೆ ವಾರವಾರ ಸಾಗಿಸಲಾಗುತ್ತಿದೆ ಎಂದು ವಾಲ್ಟರ್ ವಿಚಿಲ್ ವರದಿ ಮಾಡಿರುವನು.

ರಷ್ಯನ್ನರು ಆಸ್ಟ್ರಿಯಾ ಎಣ್ಣೆ ಕೇಂದ್ರವನ್ನು ಆಕ್ರಮಿಸಿರುವರು

ಲಾಸ್‌ಎಂಜಲ್ಸಿನಲ್ಲಿ ಮುಖ್ಯ ನ್ಯಾಯಸ್ಥಾನದಲ್ಲಿ 11 ಮಂದಿ ಸ್ತ್ರೀಯರು ಮತ್ತು ಒಬ್ಬ ಪುರುಷನಿಂದ ಕೂಡಿದ್ದ ಜ್ಯೂರಿಯವರು ಲೋಕ ಪ್ರಖ್ಯಾತ ಹಾಸ್ಯಗಾರ ನಟ ಚಾರ್ಲಿ ಚಾಪ್ಲಿನ್ ಮೇಲೆ ಬಂದಿದ್ದ ಮೊಕದ್ದಮೆಯಲ್ಲಿ ಜೋನ್ ಬೇರಿಯಳ 18 ತಿಂಗಳ ಮಗುವಿಗೆ ಈತನೇ ತಂದೆಯೆಂದು ನಿರ್ಣಯಿಸಿದರು.

ದೆಹಲಿಯಲ್ಲಿ ದಿವಸಕ್ಕೆ ಹತ್ತು ವಾಸದ ಮನೆಗಳನ್ನು 48 ನಿಮಿಷದಲ್ಲಿ ಒಂದರಂತೆ ಕಟ್ಟುತ್ತಿರುವರು. ಈ ಕಾಲನಿಯಲ್ಲಿ ಆಸ್ಪತ್ರೆ, ಆರೋಗ್ಯ ಇಲಾಖೆ ಹೆರಿಗೆ ಆಸ್ಪತ್ರೆ ಹುಡುಗರ ಪಾಠಶಾಲೆ ಅಂಗಡಿ ಅಗಸಗಟ್ಟ ಗಾಡಿಗಳ ಚೌಕ ಸಿನಿಮಾಹಾಲ್ ಲೈಬ್ರೆರಿ, ಪಾರ್ಕು ಆಟದ ಸ್ಥಳ ಇವನ್ನು 30 ಕೋಟಿ ರೂ. ಅಂದಾಜಿನಲ್ಲಿ ಕಟ್ಟುವರು. ಈವರೆಗೆ ಇಷ್ಟು ಬೇಗ ಮನೆಗಳನ್ನು ಯಾರೂ ಕಟ್ಟುತ್ತಿರಲಿಲ್ಲ.

From 20—4—45
At Ranjit

Police

ಪ್ರೇಂ ಆದಿಬ್ — ರತ್ನಮಾಲಾ
ರಾಜಕ — ಜೀವಕ
ಮುಂತಾದವರು ಪಾತ್ರವಹಿಸಿರುವ

ಪೋಲೀಸ್

(ಹಿಂದಿ)

ಅಂದಾದ ಮುದ್ರಣ ಕೆಲಸಕ್ಕೆ
ಧನಲಕ್ಷ್ಮಿ ಪ್ರೆಸ್
ಮೈಸೂರು

Edited, Printed and published by M. S. Krishna Rao, at the Satyavadi Press, Chamaraja Agrahar, Mysore

GIFTS
AND
PRESENTATION
ARTICLES
OF DISTINCTION



I. J. HALL
ASOKA ROAD
MYSORE

ಐ.ಜೆ. ಹಾಲ್, ಸರಾಫ್ ಅಂಗಡಿ
ರವೇ ಬೀದಿ, ಮೈಸೂರು